ಸಿ.ಸಿ ನಂ.- **328/2018**

ಪಿ.ಡಬ್ಲ್ಯೂ **1**

ಸಾಕ್ಷಿಯು ದಿನಾಂಕ- **29-06-2024** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿ ಪರ ವಕೀಲರಿಂದ -

**8.** ಆರೋಪಿಗೆ ಸಾಲ ಕೊಡುವ ದಿನ ನಾನು ಆರೋಪಿಯಿಂದ ನಾನು ಪ್ರಾಮಿಸರಿ ನೋಟನ್ನು ಪಡೆದುಕೊಂಡಿದ್ದೆನು. ಅದೇ ದಿನ ನಾನು ಚೆಕ್ ನ್ನು ಪಡೆದುಕೊಂಡಿದ್ದೆನು ಎಂದರೆ ಸರಿ. ನಾನು ಆರೋಪಿಗೆ ಸಾಲ ಕೊಡುವ ಸಮಯದಲ್ಲಿ ಆರೋಪಿಯ ತಾಯಿ ಹಾಗೂ ಅಣ್ಣ ಇದ್ದರು. ನಾನು ಪ್ರಾಮಿಸರಿ ನೋಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆರೋಪಿ ಜೆಸ್ಕಾಂ ಕಚೇರಿಯಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸರಿ. ನನ್ನ ಗಂಡ ನನ್ನ ಹೆಸರಿನಲ್ಲಿ ಇರುವ ಆಸ್ತಿಯನ್ನು ಆರೋಪಿಗೆ ಮಾರಾಟ ಮಾಡಿಸಿರುತ್ತಾರೆ ಎಂದರೆ ಸರಿ. ಆರೋಪಿಯ ಚೆಕ್ ಪುಸ್ತಕ ವನ್ನು ನನ್ನ ಗಂಡನೆ ಬ್ಯಾಂಕಿನಿಂದ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ **1** ರಲ್ಲಿ ನಾನು ಮತ್ತು ನನ್ನ ಗಂಡ ಸೇರಿ ಸಹಿ ಮಾಡಿ ಸುಳ್ಳು ಪ್ರಕರಣ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೆ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಹೊಸಪೇಟೆ.